ಉತ್ತರವನ್ನು ಕೊಡಬೇಕು. 2006ರಲ್ಲಿ ಆಗಿರತಕ್ಕಂಥ ಟೆಂಡರ್‌ನ್ನು ರದ್ದು ಮಾಡಬೇಕು. ಕೇವಲ 10 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. 15 ಲಕ್ಷ ರೂಪಾಯಿ ಪ್ರತಿ ವರ್ಷ ಕಟ್ಟಬೇಕಾಗಿರತಕ್ಕಂಥದ್ದಕ್ಕೆ ಇವರು ಕೇವಲ 10 ಸಾವಿರ ರೂಪಾಯಿಗಳಿಗೆ ಹೇಗೆ ಕೊಟ್ಟಿದ್ದಾರೆ? ಇದರಲ್ಲಿ ಅಕ್ರಮ ನಡೆದಿದೆ. ಯಾವ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಈ ಟೆಂಡರ್‌ನ್ನು ರದ್ದು ಮಾಡಬೇಕು.

**ಅಧ್ಯಕ್ಷರು** : ಆಯಿತು. ಮಾನ್ಯ ಸಚಿವರೇ, ಅವರಿಗೆ ಉತ್ತರ ಹೇಳಿ. ನೀವು ಸತ್ಯಕ್ಕೆ ದೂರವಾದುದು ಎಂದು ಹೇಳಿದಿರಿ. ಅವರು ನೀವು ಹೇಳುವುದು ಸುಳ್ಳು ಎನ್ನುತ್ತಿದ್ದಾರೆ. ಪತ್ರಿಕೆಗಳಲ್ಲೆಲ್ಲಾ ಬಂದಿದೆ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಬಿ. ನಾಗರಾಜಶೆಟ್ಟಿ** : ನಾನು ಕಾನೂನಿನ ರೀತಿಯಲ್ಲಿ ಮಾತನಾಡುತ್ತಿದ್ದೇನೆ. ಅವರು ಪತ್ರಿಕೆಯಲ್ಲಿ ಬಂದ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಸರ್ಕಾರದ ಗೆಜೆಟ್‌ನಲ್ಲಿರುವಂತೆ ನಾನು ಮಾತನಾಡುತ್ತಿದ್ದೇನೆ. ಇದರಲ್ಲಿ ಅಧಿಕಾರಿಗಳಿರಬಹುದು ಅಥವಾ ಯಾರೇ ಇದರಲ್ಲಿ ತಪ್ಪು ಮಾಡಿದ್ದರೆ ಅವರ ಮೇಲೆ ನಾನು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ.

**ಅಧ್ಯಕ್ಷರು** : ಪತ್ರಿಕಾ ವರದಿ ಮೇಲೆಯೇ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಅದನ್ನೇ ನಂಬುವುದಕ್ಕಾಗುವುದಿಲ್ಲ. ಆದರೆ ಇದು ಬಹಳ ಗಂಭೀರವಾದ ವಿಚಾರ. ಪತ್ರಿಕೆಗಳಲ್ಲೆಲ್ಲಾ ಬಂದಿದೆಯೆಂದರೆ, ಅದನ್ನು ನೀವು ಎಕ್ಸ್‌ಟ್ರಾ ಕೇರ್ ತೆಗೆದುಕೊಂಡು ಅದನ್ನು ಪರಿಶೀಲನೆ ಮಾಡಿಸಿ ದಾಖಲಾತಿಗಳನ್ನು ನೋಡಿ, ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಎಂ.ಟಿ.ಬಿ. ನಾಗರಾಜ್** : ಮಾನ್ಯ ಅಧ್ಯಕ್ಷರೆ, ಉಚ್ಚ ನ್ಯಾಯಾಲಯದ ಆದೇಶವಿದೆ.

**ಅಧ್ಯಕ್ಷರು** : ಆಯಿತು, ಅವರು ಉತ್ತರ ಕೊಟ್ಟಿದ್ದಾರೆ. ನೀವು ಹೋಗಿ ಅವರ ಹತ್ತಿರ ಮಾತನಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿ.

**ಶ್ರೀ ಬಿ. ನಾಗರಾಜಶೆಟ್ಟಿ** : ಆಯಿತು, ಮಾಡುತ್ತೇನೆ.

**ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹಣವನ್ನು ಬಳಸಿಕೊಳ್ಳುವುದು**

182 (708) ಶ್ರೀ ಸಿದ್ದುಸಾವದಿ (ಜಮಖಂಡಿ) : ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆಂದು ಮಂಜೂರಾದ ಹಣವನ್ನು ಖರ್ಚು ಮಾಡಲು ಇರುವ ಮಾರ್ಗಸೂಚಿಗಳೇನು;

ಆ) ಕೇವಲ ರೂ.25 ಸಾವಿರ ಹಣವನ್ನು ಪಡೆಯಲು ಈ ಮಾರ್ಗಸೂಚಿಗಳ ಅವಶ್ಯಕತೆ ಇದೆಯೇ;

ಇ) ಸದರಿ ಮಾರ್ಗಸೂಚಿಗಳಲ್ಲಿನ ಎಲ್ಲಾ ಮಾಹಿತಿಯನ್ನು ಪೂರೈಸಲು ಸಮಯದ ಜೊತೆಗೆ ಅಷ್ಟೇ ಹಣ ಖರ್ಚಾಗುವುದರಿಂದ ಬಹಳಷ್ಟು ಜನರು ಅದನ್ನು ಪಡೆಯದಿರುವುದು ಸರ್ಕಾರಕ್ಕೆ ತಿಳಿಸಿದೆಯೇ:

ಈ) 01–01–2004ರಿಂದ ಜಮಖಂಡಿ ತಾಲ್ಲೂಕಿಗೆ ಮುಜರಾಯಿ ಇಲಾಖೆಯಿಂದ ಈ ದಿವಸದವರೆಗೆ ಮಂಜೂರಾದ, ಖರ್ಚಾದ, ಖರ್ಚು ಆಗದೆ ಬಾಕಿ ಉಳಿದಿರುವ ಹಣವೆಷ್ಟು? (ವರ್ಷವಾರು ಪೂರ್ಣ ವಿವರಗಳನ್ನು ನೀಡುವುದು)

ಶ್ರೀ ಬಿ. ನಾಗರಾಜಶೆಟ್ಟಿ (ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು) :

ಅ) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 59 ಮುಅಬಿ 2001 ದಿನಾಂಕ: 04–09–2001ರ ಮಾರ್ಗಸೂಚಿ ಪ್ರಕಾರ

ಮತ್ತು

ಹಿಂದಿನ ಬಾಂಬೆ ಪ್ರಾಂತ್ಯದ ಜಿಲ್ಲೆಗಳಲ್ಲಿ ಇದ್ದ ಟ್ರಸ್ಟ್‌ಗಳು/ ಅಧಿಸೂಚಿತ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಧಾರ್ಮಿಕ ದತ್ತಿ ಆಯುಕ್ತರು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರ ಕ್ರಮಾಂಕ:ಸಿಎನ್‌ಆರ್/2/ಸಿಆರ್/88/2003–04 ದಿನಾಂಕ: 29–06–2004ರಲ್ಲಿ ನೀಡಿರುವ ಸ್ಪಷ್ಟೀಕರಣದಂತೆ ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುತ್ತಿದೆ.

ಆ) ಸರ್ಕಾರದ ಹಣ ದುರುಪಯೋಗವಾಗುವುದನ್ನು ತಪ್ಪಿಸಲು ಉತ್ತರ (ಅ)ನಲ್ಲಿ ನೀಡಿರುವಂತೆ ಸರ್ಕಾರದ ಮಾರ್ಗಸೂಚಿ ಮತ್ತು ಧಾರ್ಮಿಕ ದತ್ತಿ ಆಯುಕ್ತರ ಪತ್ರ ದಿನಾಂಕ: 29–06–2004ರಲ್ಲಿ ನೀಡಿರುವ ಸ್ಪಷ್ಟೀಕರಣದಂತೆ ಅಗತ್ಯ ದಾಖಲೆಗಳನ್ನು ಪಡೆಯಬೇಕಾಗುತ್ತದೆ.

ಇ) ಈ ಮೊದಲು ಧರ್ಮದತ್ತಿ ಆಯುಕ್ತರು ಬೆಳಗಾವಿ ಇವರು ಸರ್ಕಾರದಿಂದ ಮಂಜೂರಾಗಿದ್ದ ಹಣವನ್ನು ಬಿಡುಗಡೆ ಮಾಡಲು ಅಗತ್ಯ ದಾಖಲೆಗಳನ್ನು ಅಂದರೆ ರೂ. 20/– ಬಾಂಡ್ ಮೇಲೆ ಅಧ್ಯಕ್ಷರಿಂದ ಒಪ್ಪಿಗೆ ಪತ್ರ ಪಾಸ್‌ಬುಕ್, ಜೆರಾಕ್ಸ್ ಪ್ರತಿ, ಸಂಸ್ಥೆ ನೋಂದಣಿ ಆದ ಬಗ್ಗೆ ಪತ್ರ, ಅಂದಾಜು ಪತ್ರಿಕೆ, ನಕಾಶೆ, ಆಸ್ತಿಯ ಪಂಚಾಯತ್ ಉತಾರ, ಕಟ್ಟಡ ರಚನೆ ಪರವಾನಗಿ ಪತ್ರ ಹಣ ಪಡೆಯುವ ಕುರಿತು ಸಮಿತಿಯ ಠರಾವು ನಕಲು ಈ ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ಬಿಡುಗಡೆ ಮಾಡಲಾಗುತ್ತಿತ್ತು.

ನೂತನ ಕಾಯಿದೆ ಜಾರಿಗೆ ಬಂದ ನಂತರ ಅಧಿಸೂಚಿತ ಸಂಸ್ಥೆಗಳು ಜಿಲ್ಲಾಧಿಕಾರಿಗಳ ಕಾರ್ಯವ್ಯಾಪ್ತಿಗೆ ಒಳಪಟ್ಟರು ಸಹ ಸರ್ಕಾರದ ಹಣ ದುರುಪಯೋಗ ಆಗಲಾರದಂತೆ ಮೇಲಿನ ದಾಖಲೆಗಳನ್ನು ಹಾಜರುಪಡಿಸಿಕೊಂಡು ಹಣ ಬಿಡುಗಡೆ ಮಾಡುವುದು ಅವಶ್ಯಕವಿದೆ.

ಈ) ಸರ್ಕಾರದ ದಿನಾಂಕ: 01–01–2004ರಿಂದ ಈ ದಿವಸದವರೆಗೆ ಸರ್ಕಾರದಿಂದ ಮಂಜೂರಾದ ಖರ್ಚಾದ ಬಾಕಿ ಉಳಿದಿರುವ ಅನುದಾನ ವಿವರ ಈ ಕೆಳಕಂಡಂತೆ ಇರುತ್ತದೆ

| ವರ್ಷ | ಸಂಸ್ಥೆಯ ಸಂಖ್ಯೆ | ಮಂಜೂರಾದ ಅನುದಾನ |
|---|---|---|
| 2003–04 | 3 | ರೂ. 0.65 ಲಕ್ಷ |
| 2004–05 | 4 | ರೂ. 1.00 ಲಕ್ಷ |

| ವರ್ಷ | ಸಂಸ್ಥೆಯ ಸಂಖ್ಯೆ | ಮಂಜೂರಾದ ಅನುದಾನ |
|---|---|---|
| 2005–06 | 3 | ರೂ. 0.75 ಲಕ್ಷ |
| **ಒಟ್ಟು** | **10** | **ರೂ. 2.40 ಲಕ್ಷ** |

ರೂ. 2.40 ಲಕ್ಷಗಳಲ್ಲಿ ರೂ. 65,000.00 ಖರ್ಚಾಗಿದ್ದು, ರೂ. 1.75 ಲಕ್ಷ ಅನುದಾನ ಬಾಕಿ ಇರುತ್ತದೆ.

**ಶ್ರೀ ಸಿದ್ದು ಸವದಿ** : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಮೂರು ವರ್ಷದಿಂದ ನಮ್ಮ ಜಮಖಂಡಿ ತಾಲ್ಲೂಕಿಗೆ ಮುಜರಾಯಿ ಇಲಾಖೆಯಿಂದ ಮಂಜೂರಾದ ಹಣ 2 ಲಕ್ಷ 40 ಸಾವಿರ. ಆದರೆ ಅದರಲ್ಲಿ ಕೇವಲ 65 ಸಾವಿರ ರೂ. ಮಾತ್ರ ಉಪಯೋಗ ಮಾಡಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣವೇನೆಂದರೆ, ಇವರು ಮುಜರಾಯಿ ಇಲಾಖೆಯಿಂದ ಜೀರ್ಣೋದ್ಧಾರಕ್ಕೆಂದು 20 ರಿಂದ 25 ಸಾವಿರ ರೂಪಾಯಿಗಳನ್ನು ಒಂದು ದೇವಸ್ಥಾನಕ್ಕೆ ಕೊಡುತ್ತಿದ್ದಾರೆ. ಆದರೆ ಅದರ ನಿಯಮಾವಳಿ ಪ್ರಕಾರ ನಾವು ರೆಡಿ ಮಾಡಿ ಆಯಾಯ ಇಲಾಖೆಗಳಿಂದ ತಂದುಕೊಡಬೇಕಾದರೆ ಅಥವಾ ಎಸ್ಟಿಮೇಟ್ ಮಾಡಬೇಕಾದರೂ ಕೂಡ ನಮಗೆ ಅವರು ಕೊಡುವುದಕ್ಕಿಂತ ಡಬ್ಬಲ್ ದುಡ್ಡು ಖರ್ಚಾಗುತ್ತಿದೆ. ಆ ರೀತಿ ವ್ಯವಸ್ಥೆ ಇರುವುದನ್ನು ಏನಾದರೂ ಸರಳೀಕರಣಗೊಳಿಸಬೇಕು ಎನ್ನುವಂಥ ನಿಟ್ಟಿನಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ನೀವು ಕೊಡುವುದು 25 ಸಾವಿರ ರೂ. ಆದರೆ 40 ಸಾವಿರ ರೂಪಾಯಿಗಳನ್ನು ನಾವು ಖರ್ಚು ಮಾಡಿ ದಾಖಲೆ ಪತ್ರಗಳನ್ನು ಒದಗಿಸಬೇಕಾಗುತ್ತದೆ. ಈ ರೀತಿ ಆದರೆ 25 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೇಗೆ ದೇವಸ್ಥಾನದ ಜೀರ್ಣೋದ್ಧಾರವನ್ನು ಮಾಡುವುದಕ್ಕೆ ಆಗುತ್ತದೆ? ನಾನು ಹೇಳುವುದೇನೆಂದರೆ ಕೊಡುವ ಹಣವನ್ನು ಹೆಚ್ಚು ಮಾಡಿ ಕೊಡಿ ಅಥವಾ ನಿಯಮಾವಳಿಗಳನ್ನು ಕಡಿಮೆ ಮಾಡಿ ಬೇಗನೇ ಆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ದುಡ್ಡು ಸಿಗುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಿಗೆ ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ.

**ಶ್ರೀ ಬಿ. ನಾಗರಾಜಶೆಟ್ಟಿ (ಮುಜರಾಯಿ ಸಚಿವರು)** : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಮುಂದಿಟ್ಟಿದ್ದಾರೆ. ಈ ಬಗ್ಗೆ ನಾನು ಈಗಾಗಲೇ ನಮ್ಮ ಆ್ಯಕ್ಟ್‌ನಲ್ಲಿ ಕೆಲವು ಅಮೆಂಡ್‌ಮೆಂಟ್ ತರಬೇಕೆಂದು ಒಂದು ವಿಶೇಷ ಸಮಿತಿಯನ್ನು ಮಾಡುವಂಥ ವಿಚಾರವೊಂದಿದೆ. ಏಕೆಂದರೆ ಸರ್ಕಾರದಿಂದ ಕೊಡುವಂಥ ಹಣ ಏನಿದೆ ಅದನ್ನು ಪಡೆಯಲು ಅದಕ್ಕಾಗಿ ಅನೇಕ ದಾಖಲಾತಿಗಳನ್ನು ಒದಗಿಸುವುದಕ್ಕೇ ಹೆಚ್ಚು ಹಣ ಅವರಿಗೆ ಖರ್ಚಾಗುತ್ತದೆ. ಸಾಧ್ಯವಾದ ಮಟ್ಟಿಗೆ ಸುಲಭ ಮಾರ್ಗದಲ್ಲಿ ಯಾವ ರೀತಿ ಕೊಡಬಹುದು ಎಂಬುದು ಒಂದು, ಎರಡನೆಯದಾಗಿ ಸಮಗ್ರ ಕರ್ನಾಟಕ ರಾಜ್ಯದ ಎಲ್ಲಾ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುವಂಥ ವ್ಯವಸ್ಥೆ ಬಗ್ಗೆ ನಾವು ಮುಂದೆ ಕಾರ್ಯಯೋಜನೆಯನ್ನು ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ತಮ್ಮ ಸಲಹೆಯನ್ನು ನನ್ನ ಗಮನಕ್ಕೆ ತೆಗೆದುಕೊಳ್ಳುತ್ತೇನೆ.

**ಶ್ರೀ ಸಿದ್ದು ಸವದಿ** : ಮಾನ್ಯ ಅಧ್ಯಕ್ಷರೆ, ನಾವು ಜೀರ್ಣೋದ್ಧಾರಕ್ಕೆಂದು ಪ್ರತಿ ವರ್ಷ ಮುಜರಾಯಿ ಇಲಾಖೆಗೆ 5 ಲಕ್ಷ, 10 ಲಕ್ಷ ರೂಪಾಯಿಗಳವರೆಗೆ ಒಂದು ಪ್ರಪೋಸಲ್‌ನ್ನು ಕೊಟ್ಟಿರುತ್ತೇವೆ. ಆದರೆ ನಮಗೆ ಕಳೆದ ಮೂರು ವರ್ಷಗಳಲ್ಲಿ ಕೇವಲ 2 ಲಕ್ಷ 40 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ರೀತಿ ತಾರತಮ್ಯವಾಗುತ್ತಿದೆ. ಈ ತಾರತಮ್ಯವನ್ನು ಸರಿಪಡಿಸಿ ಎಲ್ಲಾ ಕ್ಷೇತ್ರಗಳಿಗೆ ಸಮನಾಗಿ ಹಂಚಿಕೆ ಮಾಡಬೇಕೆಂದು ಮಾನ್ಯ ಸಚಿವರನ್ನು ತಮ್ಮ ಮುಖೇನ ನಾನು ಕೇಳಿಕೊಳ್ಳುತ್ತೇನೆ.

**ಅಧ್ಯಕ್ಷರು** : ಸ್ವಾಮಿ ಸಿದ್ದು ಸವದಿಯವರೆ, ನನ್ನ ಕ್ಷೇತ್ರಕ್ಕೆ ಕೊಟ್ಟೇ ಇಲ್ಲಾ ಸ್ವಾಮಿ. ನಿಮಗೆ 2 ಲಕ್ಷ 40 ಸಾವಿರ ರೂಪಾಯಿಗಳನ್ನಾದರೂ ಕೊಟ್ಟಿದ್ದಾರೆ. ನಮಗೆ ಕೊಟ್ಟೇ ಇಲ್ಲವಲ್ಲಾ.

**ಶ್ರೀ ಸಿದ್ದು ಸವದಿ** : ಮಾನ್ಯ ಅಧ್ಯಕ್ಷರೆ, ಈ ಹಣವನ್ನು ಮೂರು ವರ್ಷಗಳಲ್ಲಿ ಕೊಟ್ಟಿರುವುದು. ಒಂದೊಂದು ದೇವಸ್ಥಾನಕ್ಕೆ 20 ಸಾವಿರ, 25 ಸಾವಿರ ಕೊಟ್ಟಿರುವುದು ಒಟ್ಟು ಮೂರು ವರ್ಷಗಳಲ್ಲಿ ಕೊಟ್ಟಿರುವುದು. ಒಟ್ಟು 2 ಲಕ್ಷ 40 ಸಾವಿರದಲ್ಲಿ ಕೇವಲ 65 ಸಾವಿರ ಖರ್ಚಾಗಿರುವುದು.

**ಅಧ್ಯಕ್ಷರು** : ಸಚಿವರು ಉತ್ತರ ಹೇಳುತ್ತಾರೆ ತಾಳಿ.

**ಶ್ರೀ ಬಿ. ನಾಗರಾಜಶೆಟ್ಟಿ** : ಮಾಡುತ್ತೇವೆ ಸಾರ್.

## ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ ವಿತರಣೆ

183 (991) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನಲ್ಲಿ ರೈತರಿಗೆ ಅಡಚಣೆ ಇಲ್ಲದಂತೆ ಬಿತ್ತನೆ ಬೀಜವನ್ನು ವಿತರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ರಾಜ್ಯದಲ್ಲಿ ಈಗಾಗಲೇ ಮುಂಗಾರು ಆರಂಭವಾಗಿದ್ದು, ಈ ಸಾಲಿನಲ್ಲಿ ಇಲ್ಲಿಯವರೆವಿಗೆ ಪ್ರತಿ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ಬಿತ್ತನೆ ಬೀಜವನ್ನು ರೈತರಿಗೆ ಪೂರೈಸಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು;

ಇ) ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ (ಉದಾ: ಹೆಚ್.ಡಿ. ಕೋಟೆಯಲ್ಲಿ ಇತ್ತೀಚೆಗೆ ಈ ವಿಷಯವಾಗಿ ಉಂಟಾದ ಗಲಭೆ) ಸಕಾಲಕ್ಕೆ ಬಿತ್ತನೆ ಬೀಜ ಲಭ್ಯವಾಗದೇ/ ದಾಸ್ತಾನಿಲ್ಲದೆ ರೈತರು ತೊಂದರೆಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣರಾದ ಬೀಜ ನಿಗಮದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಉ) ಕೃಷಿ ಇಲಾಖೆಯಲ್ಲಿ ಹಣದ ಅಭಾವದಿಂದಾಗಿ ಬಿತ್ತನೆ ಬೀಜ ಪೂರೈಕೆಯಲ್ಲಿ ತೊಂದರೆಯಾಗುತ್ತಿರುವುದು ನಿಜವೇ;